ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-1 Issue 2, Sep-Oct 2019, 37-45
©IIMRD, Mysuru
IIMRD JOURNALS
www.iimrd.com

# ಸುಡುಗಾಡುಸಿದ್ಧ ಸಮುದಾಯದ ನಂಬಿಕೆ ಮತ್ತು ಆಚರಣೆಗಳು

**ಡಾ. ಎಚ್. ಮಂಜು**[1]

## ಪೀಠಿಕೆ

ಸುಡುಗಾಡು ಸಿದ್ಧರು ವಿಚಿತ್ರವಾದ ವೇಷಭೂಷಣಗಳನ್ನು ಹಾಕಿಕೊಂಡು ಕೈಚಳಕದ ವಿದ್ಯೆಯನ್ನು ಪ್ರದರ್ಶಿಸುತ್ತಾ ಭಿಕ್ಷಾಟನೆ ಮಾಡಿಕೊಂಡು ಜೀವನ ಸಾಗಿಸುತ್ತಾರೆ. ಈ ಸಮುದಾಯದವರನ್ನು ನೋಡಿದ ಜನಸಾಮಾನ್ಯರಿಗೆ ತುಂಬಾ ಆಕರ್ಷಣೀಯ ವ್ಯಕ್ತಿಗಳಾಗಿ ಕಂಡುಬರುತ್ತಾರೆ. ಶೈವ ಕಾಶಾಮುಖ, ಕಾಪಾಲಿಕ ಪಂಗಡಗಳ ಪಳೆಯುಳಿಕೆಯಂತೆ ಕಂಡುಬರುವ ಈ ಸಮುದಾಯ ಪ್ರಾಚೀನ ಕಾಲದಲ್ಲಿ ಹಲವಾರು ಜಾತಿ, ಸಮುದಾಯಗಳನ್ನೊಳಗೊಂಡ ಒಂದು ಪಂಗಡವಾಗಿದ್ದು, ಕಾಲಕ್ರಮೇಣ ಅದೇ ಒಂದು ಪ್ರತ್ಯೇಕವಾದ ಸಮುದಾಯವಾಗಿ ರೂಪುಗೊಂಡಿರಬೇಕು ಎನಿಸುತ್ತದೆ.

ಸುಡುಗಾಡು ಸಿದ್ಧ ಪದವನ್ನು ಕುರಿತು ಕಿಟಲ್ ಅವರು ಸುಡ, ಸುಡನಾಸ, ಸುಡನಾಸಿ ಎಂಬ ಅರ್ಥವನ್ನು ಕೊಟ್ಟಿದ್ದಾರೆ. ***ಸುಡು*** ಎಂಬ ಪದಕ್ಕೆ ಸುಡುಗಾಡ, ಸುಡುಗರ, ಸುಡುಗಾಡು, ಕಾಡು ಸ್ಮಶಾನ, ಪಿತ್ರವನ ಸೊಡಬಲಿ, ***ಕಾಡು, ಗಾಡು*** ಪದವನ್ನು ಕುರಿತು ಅರಣ್ಯ, ಕಾನನ, ಅಡವಿ ಮುಂತಾದುವುಗಳು ಹಾಗೂ ***ಸಿದ್ಧ*** ಪದದ ಅರ್ಥ ಉಣ್ಣಲು ತಯಾರಾದ ಹಾಗೂ ***ಸಿದ್ಧಿ*** ಎಂದರೆ ಪರಿಪೂರ್ಣವಾದ ಅಂದರೆ ತಾನು ಇಷ್ಟಪಟ್ಟ ಕೆಲಸದಲ್ಲಿ ಗುರಿಯನ್ನು ತಲುಪುವವ, ಸಾಧಿಸಿ ತೋರಿಸುವವ ಎಂಬ ಅರ್ಥಗಳಾಗುತ್ತವೆ. ಇವರು ಸ್ಮಶಾನಗಳಲ್ಲಿದ್ದುಕೊಂಡು ಸಾಧನೆ ಮಾಡುವ ವಿಚಾರಗಳು ತಿಳಿದು ಬರುತ್ತವೆ. ಹೀಗೆ ಸುಡುಗಾಡು ಸಿದ್ಧರನ್ನು ಕುರಿತಂತೆ ಅನೇಕ ವಿಚಾರಗಳನ್ನು ಕಿಟಲ್ ಅವರು ತಿಳಿಸಿದ್ದಾರೆ.

## ಸುಡುಗಾಡು ಸಿದ್ಧರ ಹಿನ್ನಲೆ

ಸುಡುಗಾಡು ಸಿದ್ಧರು ಆಂಧ್ರಪ್ರದೇಶದ ಮೂಲದವರಾಗಿದ್ದು ಕಾಲಕ್ರಮೇಣ ಕರ್ನಾಟಕ ರಾಜ್ಯಕ್ಕೆ ಸುಮಾರು 12ನೇ ಶತಮಾನದಿಂದೀಚೆಗೆ ಸಂಚರಿಸುತ್ತಾ ವಲಸೆ ಬಂದಿರಬಹುದು ಎಂದು ಊಹಿಸಲಾಗಿದೆ. ಇವರ ಮಾತೃಭಾಷೆ ತೆಲುಗು ಭಾಷೆಯಾಗಿದೆ. ಇಂದಿಗೂ ತಮ್ಮ ಮನೆಗಳಲ್ಲಿ ತೆಲುಗು ಮಾತನಾಡುತ್ತಾರೆ. ಇವರು ಚಿತ್ರದುರ್ಗ, ಬಳ್ಳಾರಿ, ರಾಯಚೂರು, ಗುಲಬರ್ಗಾ, ಶಿವಮೊಗ್ಗ, ಹಾಸನ, ಬೆಳಗಾವಿ, ಬಿಜಾಪುರ, ಧಾರವಾಡ, ಹಾವೇರಿ ಹೀಗೆ ಕರ್ನಾಟಕ ರಾಜ್ಯದೆಲ್ಲೆಡೆ ಹಂಚಿಹೋಗಿದ್ದಾರೆ. ಸುಡುಗಾಡು ಸಿದ್ಧ ಸಮುದಾಯದ ನಂಬಿಕೆ ಮತ್ತು ಆಚರಣೆಗಳನ್ನು ತಿಳಿಸುವುದೇ ಈ ಲೇಖನದ ಮೂಲ ಉದ್ದೇಶ.

---

[1] ***ಸಹಾಯಕ ಪ್ರಾಧ್ಯಾಪಕರು, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ, ಗೊಟಗೋಡಿ, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ–581205***

**ಸುಡುಗಾಡು ಸಿದ್ಧರ ಸಾಂಸ್ಕೃತಿಕ ಆಚರಣೆಗಳು**

ಇಂದಿನ ಆಧುನಿಕ ಜಾಗತೀಕರಣ ಯುಗದಲ್ಲೂ ತಮ್ಮದೇ ಆದ ಆಚಾರ, ವಿಚಾರ, ರೂಢಿ ಸಂಪ್ರದಾಯಗಳು, ಉಡುಗೆ ತೊಡುಗೆ, ಆಹಾರ ಪದ್ಧತಿ, ವಸತಿ ಕ್ರಮ, ಭಾಷೆ, ಕಲೆ, ಸಾಹಿತ್ಯ, ನಂಬಿಕೆ ಮತ್ತು ಆಚರಣೆಗಳು ಒಟ್ಟಾರೆಯಾಗಿ ಅವರ ಕಟ್ಟುನಿಟ್ಟಿನ ಸಂಸ್ಕೃತಿಯನ್ನು ಇಂದಿಗೂ ಚಾಚು ತಪ್ಪದೇ ಆಚರಿಸಿಕೊಂಡು ಬರುತ್ತಿರುವುದನ್ನು ನೋಡಬಹುದಾಗಿದೆ.

ಪ್ರತಿಯೊಂದು ಸಮುದಾಯದ ಜನಜೀವನದ ಸಂಸ್ಕೃತಿಯು ಅವರ ನಂಬಿಕೆ ಮತ್ತು ಆಚರಣೆಗಳಲ್ಲಿ ಪ್ರತಿಬಿಂಬಿಸುತ್ತವೆ. ಇವುಗಳು ಶ್ರೀ ಸಾಮಾನ್ಯನ ಜೀವನದ ವಿವಿಧ ಘಟ್ಟಗಳಲ್ಲಿ ಕಾಣಿಸಿಕೊಳ್ಳುತ್ತವೆ. ಸಾಮಾನ್ಯವಾಗಿ ಅವರ ದೈನಂದಿನ ಆಗು–ಹೋಗುಗಳಲ್ಲಿ, ಮದುವೆ ಮುಂಜಿಗಳಲ್ಲಿ, ಹಬ್ಬ ಹರಿದಿನಗಳಲ್ಲಿ, ಹುಟ್ಟು–ಸಾವುಗಳಲ್ಲಿ ಮುಂತಾದುವುಗಳಲ್ಲಿ ಹೊರ ಹೊಮ್ಮುತ್ತವೆ. ಜನಸಾಮಾನ್ಯರು ಯಾವುದೇ ರೀತಿಯ ತೊಂದರೆ ಇಲ್ಲದೆ ನೆಮ್ಮದಿಯಿಂದ ಜೀವನ ಮಾಡುವುದೇ ಇವುಗಳ ಪ್ರಮುಖ ಉದ್ದೇಶವಾಗಿರುತ್ತದೆ. ಪ್ರತಿಯೊಂದು ಸಮುದಾಯಗಳು ಹಾಗೂ ಪಂಗಡಗಳು ಈ ನಂಬಿಕೆ ಮತ್ತು ಆಚರಣೆಗಳನ್ನು ತಮ್ಮದೇ ಆದ ವಿಶಿಷ್ಟ ಸಂಸ್ಕೃತಿ ಸಂಪ್ರದಾಯದಲ್ಲಿ ಉಳಿಸಿಕೊಂಡು ಬೆಳೆಸಿಕೊಂಡು ಬಂದಿವೆ. ಇಂದಿಗೂ ಸಹ ಧಾರ್ಮಿಕ ಹಿನ್ನಲೆಯಲ್ಲಿ ಅವುಗಳನ್ನು ಪೋಷಿಸಿಕೊಂಡು ಬಂದಿದ್ದಾರೆ.

**ಜನನ ಸಂಸ್ಕಾರ**

ಸುಡುಗಾಡು ಸಿದ್ಧರಲ್ಲಿ ಮಗುವಿನ ಜನನದ ಸಂದರ್ಭವು ಕೇವಲ ತಾಯಿ ತಂದೆಗಳಿಗಲ್ಲದೆ ಹಟ್ಟಿಯ ಜನರಿಗೆಲ್ಲಾ ಸಂತೋಷದ ಸಂಗತಿಯಾಗಿದೆ. ಅವರಲ್ಲಿ ಹೆಣ್ಣು ಇಲ್ಲವೆ ಗಂಡು ಮಗುವಿನ ಜನನಕ್ಕೆ ಯಾವುದೇ ರೀತಿಯ ತಾರತಮ್ಯಗಳಿಲ್ಲ. ಮಗು ಹುಟ್ಟಿದ ಮೂರು ದಿವಸಕ್ಕೆ *ಶಟಾವಿ* ಪೂಜೆಯನ್ನು ನೆರವೇರಿಸುವುದರ ಮೂಲಕ ಮಗುವಿಗೆ ನಾಮಕರಣ ಮಾಡುತ್ತಾರೆ. ಅಂದು ಹಟ್ಟಿಯ ಜನರೆಲ್ಲಾ ಸೇರಿ ಬೇಟೆಯಾಡಿ ತಂದ ಮಾಂಸದಲ್ಲಿ ಹುಟ್ಟಿದ ಕೂಸಿಗೆ ಒಂದು ಪಾಲು ಕೊಟ್ಟು ಇನ್ನುಳಿದದ್ದನ್ನು ಹಂಚಿಕೊಂಡು ಮಗುವಿಗೆ ನಾಮಕರಣ ಮಾಡುತ್ತಾರೆ. ಆ ದಿನ ಹಟ್ಟಿಯ ಜನರಿಗೆಲ್ಲ ಮಾಂಸದ ಊಟ ಹಾಗೂ ಕುಡಿಯಲು ಸೇಂದಿ ಸಾರಾಯಿ ಕೊಡುತ್ತಾರೆ. ಹುಟ್ಟಿದ ಮಗುವಿಗೆ ಉಸಿರಾಟದ ತೊಂದರೆಯಾಗದಿರಲೆಂದು ಹಾಗೂ ಅಲೆಮಾರಿಗಳಾದ ಸಿದ್ಧರು ಮಗುವಿಗೆ ಶೀತ ಬರದಿರಲೆಂಬ ಆಶಯಗಳಿಂದ ಸೂಜಿ ಕಾಯಿಸಿ ಮಗುವಿನ ಎದೆ ಗುಂಡಿಗೆ, ಹೊಕ್ಕುಳು, ಪಕ್ಕೆಯ ಎಡಬಲ ಭಾಗಗಳಲ್ಲಿ ಬರೆ ಹಾಕುತ್ತಾರೆ. ಮಗುವಿನ ಜನನವಾದ ಸ್ಥಳದಲ್ಲಿ ಒಂದು ಕೋಳಿ ಬಲಿಕೊಟ್ಟು ಅದರ ರಕ್ತವನ್ನು ಮಗುವಿನ ಹಣೆಗೆ ಹಚ್ಚುತ್ತಾರೆ. ಇದರಿಂದ ಆ ಮಗುವಿನ ಪೀಡೆಗಳೆಲ್ಲ ದೂರವಾಗುತ್ತವೆಂಬುದು ಅವರ ಬಲವಾದ ನಂಬಿಕೆ.

ಹೆರಿಗೆ ಎಷ್ಟೇ ಕಷ್ಟವಾದರೂ ಸುಡುಗಾಡು ಸಿದ್ಧರು ಆಸ್ಪತ್ರೆಗಳಿಗೆ ಹೋಗುವುದಿಲ್ಲ. ಹೆರಿಗೆ ತುಂಬಾ ಕಷ್ಟವೆಂದು ತಿಳಿದುಬಂದಾಗ ಹಿರಿಯರ ಸೂಚನೆಯ ಮೇರೆಗೆ ಮೀಸಲು ನೀರು ತಂದು ಗರ್ಭಿಣಿಗೆ ಕುಡಿಸುತ್ತಾರೆ. ಮುತ್ತೈದೆಯರು ಹಟ್ಟಿಯಿಂದ ಬಾವಿ, ಇಲ್ಲವೆ ಹತ್ತಿರದ ಹಳ್ಳದವರೆಗೆ ಸಾಲಾಗಿ ನಿಂತು ಮಣ್ಣಿನ ಬಿಂದಿಗೆಯಿಂದ ನೀರು ತಂದು ಕುಡಿಸುತ್ತಾರೆ. ಇದಕ್ಕೆ 'ಧರ್ಮದ ನೀರು' ಎಂದು ಕರೆಯುತ್ತಾರೆ. ಇಷ್ಟಕ್ಕೂ ಹೆರಿಗೆ ಸುಲಭವಾಗದಿದ್ದಲ್ಲಿ ಕುದುರೆ ಎಂಜಲು ಮಾಡಿದ ಪದಾರ್ಥವನ್ನು ಗರ್ಭಿಣಿಗೆ ತಿನಿಸುತ್ತಾರೆ. ಇಷ್ಟೆಲ್ಲ

ಪ್ರಯತ್ನದ ನಂತರವೂ ಹೆರಿಗೆ ಆಗದಿದ್ದರೆ ಮುತ್ತೈದೆಯರಿಂದ ಊರ ಸೀಮೆಯಲ್ಲಿರುವ ಮಕ್ಕಳ ಕಲ್ಲು ತಿರುಗಿಸುತ್ತಾರೆ. ಹೀಗೆ ಮಾಡುವುದರಿಂದ ಖಂಡಿತ ಹೆರಿಗೆ ಸುಲಭವಾಗುವುದೆಂದು ತಿಳಿದಿದ್ದಾರೆ. ಇದಾಗಿಯೂ ಹೆರಿಗೆ ಆಗದಿದ್ದರೆ ದೇವರ ಮೇಲೆ ಭಾರಹಾಕಿ ಕುಳಿತುಕೊಳ್ಳುತ್ತಾರೆ. ಮಗು ಜನನವಾದ ಐದು ದಿನಕ್ಕೆ *ಐದೇಶಿ* ಮಾಡುತ್ತಾರೆ. ಹೆರಿಗೆ ಮಾಡಿಸಿದವಳು ಜೋಳಕ್ಕೆ ಕಾಡಿಗೆ, ಕುಂಕುಮ ಹಚ್ಚಿ ಅದರ ಮೇಲೆ ಬೇವಿನ ತಪ್ಪಲು ಇಡುತ್ತಾಳೆ. ಪೂಜೆಗೆ ಒಂಭತ್ತು ಕಡೆಗೆ ಕೋಳಿ ಮಾಂಸ ಸಹಿತ ಎಡೆ ಮುದ್ದೆ ಹಾಗೂ ಬಳ್ಳೊಳ್ಳಿಯನ್ನು ಇಡುತ್ತಾರೆ. ಹೀಗೆ *ಶಟವಿ ಪೂಜೆ* ಮಾಡಿದ ಮೇಲೆ ರಾತ್ರಿ *ಈರಲ ಪೂಜೆ* ಮಾಡುತ್ತಾರೆ. ದೇವರಿಗೆ ಎಡೆ ಇಟ್ಟು ಅದನ್ನು ಹಸಿದ ನಾಯಿಗೆ ಜಳಿಹಾಕುತ್ತಾರೆ. ನಾಯಿ ಆ ಎಡೆಯನ್ನು ತಿನ್ನುತ್ತಿರುವಾಗ ಮನೆಗೆ ಹಿರಿಯರಾದವರು ಅದನ್ನು ಕೋಲಿನಿಂದ ಬಲವಾಗಿ ಹೊಡೆಯಬೇಕು. ಹೀಗೆ ಹೊಡೆತೆ ತಿಂದ ನಾಯಿ ಜೋರಾಗಿ ಚೀರಲೆಂಬುದು ಇಲ್ಲಿಯ ಆಶಯವಾಗಿದೆ. ಈ ಬಗೆಯ ಚೀರುವಿಕೆಯಿಂದ ಮಗುವಿನ ಇಂದ್ರಿಯ ಪರೀಕ್ಷೆ ಮಾಡಿಕೊಳ್ಳುತಾರೆ ನಾಯಿಯ ಚೀರಾಟಕ್ಕೆ ಆ ಮಗುವಿನ ಪ್ರತಿಕ್ರಿಯೆಗಳನ್ನು ಗಮನಿಸುತ್ತಾರೆ.

**ನಾಮಕರಣ**

ಮಗು ಹುಟ್ಟಿದ ಮೂರು ದಿವಸಕ್ಕೆ ಇಲ್ಲವೆ ಹನ್ನೊಂದನೆ ದಿವಸಕ್ಕೆ ನಾಮಕರಣ ಮಾಡುವ ಪದ್ಧತಿಯಿದೆ. ಮಗುವಿನ ಜನನ, ನಕ್ಷತ್ರ, ಬಲೆ, ಹೆಸರು ಇತ್ಯಾದಿಗಳನ್ನು ಪುರೋಹಿತರಿಂದ ಕೇಳಿ ತೊಟ್ಟಿಲು ಪೂಜೆ ಮಾಡಿ, ದೇವರ ಹೆಸರನ್ನೊ, ತಮ್ಮ ಪೂರ್ವಜರ ಹೆಸರುಗಳನ್ನೊ, ಪ್ರಿಯವಾದ ಹೆಸರುಗಳನ್ನು ಇಟ್ಟು ಕರೆಯುವುದು ಅವರ ವಾಡಿಕೆ. ಗಂಡು ಮಗುವಾದರೆ ಸಾಮಾನ್ಯವಾಗಿ ಸಿದ್ದಪ್ಪ, ಹುಲಗಪ್ಪ, ರುದ್ರಸ್ವಾಮಿ, ರಾಮಣ್ಣ ಮುಂತಾದ ಹೆಸರುಗಳನ್ನಿಡುತ್ತಾರೆ. ಹೆಣ್ಣು ಮಗುವಾಗಿದ್ದರೆ ಹುಲಗಮ್ಮ, ದುರ್ಗಮ್ಮ, ಸಿದ್ಧಮ್ಮ, ನಾಗಮ್ಮ ಇತ್ಯಾದಿ ಹೆಸರುಗಳನ್ನಿಡುತ್ತಾರೆ.

ಮಗು ಹುಟ್ಟಿದ ಒಂಭತ್ತನೆಯ ದಿನಕ್ಕೆ ಗಂಗೆಪೂಜೆ ನಡೆಯುತ್ತದೆ. ಹಟ್ಟಿಯ ಮುತ್ತೈದೆಯರೆಲ್ಲ ಸೇರಿ ಗಂಗೆ ಪೂಜೆಗೆ ಹೊರಡುತ್ತಾರೆ. ಐದು ಮಣ್ಣಿನ ಮಡಕೆಗಳೊಂದಿಗೆ ಮಗುವಿನ ತಾಯಿಯೊಂದಿಗೆ ಹಳ್ಳಕ್ಕೆ ತೆರಳುತ್ತಾರೆ. ಹಳ್ಳದ ದಂಡೆಗೆ ಬಂದು ಹದವಾದ ಮಣ್ಣಿನಿಂದ ಗಂಗೆಯ ಮೂರ್ತಿಯನ್ನು ತಯಾರಿಸಿ ಮಗುವಿನ ತಂದೆಯಿಂದ ಎಡೆ ಇಡಿಸಿ ಪೂಜಿಸುವರು. ನಂತರದಲ್ಲಿ ನೈವೇದ್ಯವನ್ನು ಹರಿಯುವ ನೀರಿನಲ್ಲಿ ತೇಲಿ ಬಿಡುತ್ತಾರೆ. ಮಗುವಿನ ತಾಯಿಗೆ ಉಡಿತುಂಬಿ ಮನೆಗೆ ಕರೆದುಕೊಂಡು ಬರುತ್ತಾರೆ.

**ಜವಳ ತೆಗೆಸುವುದು**

ಸುಡುಗಾಡು ಸಿದ್ಧರು ಹೆಚ್ಚಾಗಿ ಧರ್ಮಸ್ಥಳ ಮತ್ತು ಸವದತ್ತಿ ಎಲ್ಲಮ್ಮ ಮುನಿರಾಬಾದನ ಹುಲ್ಲಗಿ ಶ್ರೀ ಹುಲಗೆಮ್ಮ ಇತ್ಯಾದಿ ದೇವಸ್ಥಾನಗಳಲ್ಲಿ ತಮ್ಮ ಮಕ್ಕಳ ತಲೆಯ ಕೂದಲನ್ನು ಮೀಸಲು ಅರ್ಪಿಸುತ್ತಾರೆ. ಮಗು ಹುಟ್ಟಿದ ಒಂದು ವರ್ಷ ಎರಡು ತಿಂಗಳಿಗೆ ಈ ಜವಳ ತೆಗೆಸುವ ಕಾರ್ಯ ನಡೆಯುತ್ತದೆ. ಕೆಲವರು ತಮ್ಮ ಗ್ರಾಮದಲ್ಲಿಯೇ ಇರುವ ದ್ಯಾಮವ್ವ, ದುರ್ಗವ್ವ, ಮರಿಯಮ್ಮ ದೇವತೆಗಳಿಗೆ ಮೀಸಲು ಬಿಡುತ್ತಾರೆ.

**ಋತುಮತಿ ಆಚರಣೆ**

ವಾಡಿಕೆಯಂತೆ ಹೆಣ್ಣು ಮಗಳು ಋತುಮತಿಯಾದ ವಿಷಯವನ್ನು ಓಣಿ ಹೆಂಗಸರನ್ನು ಕರೆದು ತಿಳಿಸುತ್ತಾರೆ. ಹೆಣ್ಣು ರಜಸ್ವಿಯಾದ ಸಮಯದಲ್ಲಿ ಇತರರಂತೆ ಸುಡುಗಾಡು ಸಿದ್ಧರು ಐದು ಇಲ್ಲವೇ ಹದಿನಾರು ದಿವಸ ಕೂರಿಸುತ್ತಾರೆ. ರಜಸ್ವಿಯಾದ ಹೆಣ್ಣಿನ ಮಾವನಾಗುವವನು ಅವಳಿಗಾಗಿ ಬೇವಿನ ಸೊಪ್ಪಿನಿಂದ ಹಾಕಿದ ಗುಡಿಸಲಿನಲ್ಲಿಯೇ ಇಡೀ ರಾತ್ರಿ ಇರಬೇಕು. ಈ ಸಮಯದಲ್ಲಿ ಸೋದರತ್ತೆಯಾದವಳು ಋತುಮತಿಯಾದ ಹೆಣ್ಣು ಮಗಳಿಗೆ ಸ್ನಾನಕ್ಕೆ ನೀರು ಹಾಕಬೇಕು. ಐದನೆ ದಿನ ಇಲ್ಲವೇ ಹದಿನಾರನೆಯ ದಿನ ಬೇವಿನ ಸೊಪ್ಪಿನ ಗುಡಿಸಲು ಎದುರು ಮಾವನಾದವನು ಒಂದು ಕೋಳಿ ಬಲಿ ಕೊಟ್ಟು ದೈವಕ್ಕೆ ಊಟ ಹಾಕಿಸಬೇಕು. ಈ ಸಮಯದಲ್ಲಿ ಋತುಮತಿಯಾದ ಹೆಣ್ಣಿಗೆ ತಿನ್ನಲು ಉದ್ದಿನ ಕಾಳು, ಕೊಬ್ಬರಿ, ಬೆಲ್ಲ, ಕಡಲೆ(ಅಚ್ಚು) ಹಾಲು, ತುಪ್ಪ, ಮಾಂಸವನ್ನು ಹೆಚ್ಚಾಗಿ ಕೊಡುತ್ತಾರೆ. ಐದನೇ ಇಲ್ಲವೇ ಹದಿನಾರನೇ ದಿನಕ್ಕೆ ಮನೆ ಸಾರಿಸಿ ಸ್ವಚ್ಛಗೊಳಿಸಿ ಒಲೆ ಮುಟ್ಟು ಮಾಡಿಸುತ್ತಾರೆ.

**ಮದುವೆ ಸಂಪ್ರದಾಯ**

ಮದುವೆಶಾಸ್ತ್ರಕ್ಕೆ ಸಂಬಂಧಿಸಿದಂತೆ ಸುಡುಗಾಡು ಸಿದ್ಧರ ಕ್ರಿಯಾಚರಣೆಗಳು ಇತರರಿಗಿಂತ ತೀರ ಭಿನ್ನವಾಗಿವೆ. ಅವರಲ್ಲಿ ಸಗೋತ್ರ ವಿವಾಹ ನಿಷಿದ್ಧವಾಗಿದೆ. ಸಾಮಾನ್ಯವಾಗಿ ಅಕ್ಕನ ಮಗಳನ್ನು ತಂದುಕೊಳ್ಳುತ್ತಾರೆ. ಆದರೆ ತಂಗಿ ಮಗಳನ್ನು ತಂದುಕೊಳ್ಳವುದಿಲ್ಲ. ಅವರಲ್ಲಿ ಹೆಣ್ಣಿಗೆ 'ತೆರ' ಕೊಟ್ಟು ಮದುವೆ ಮಾಡಿಕೊಳ್ಳುತ್ತಾರೆ. ಈ ತೆರ ಅಥವಾ ಕನ್ಯಾ ಶುಲ್ಕ 9 ರೂಗಳಿಂದ ಹಿಡಿದು 300 ರೂಗಳವರೆಗೆ ಇರುತ್ತದೆ. ವರದಕ್ಷಿಣೆಯ ಪಿಡುಗು ಅವರಲ್ಲಿ ಇದುವರಗೆ ಇಲ್ಲ. ಹಟ್ಟಿಯ ಹಿರಿಯರ ಮೂಲಕವೇ ಸಾಲಾವಳಿ ಕನ್ಯೆಯನ್ನು ನೋಡುತ್ತಾರೆ.

ಸುಡುಗಾಡು ಸಿದ್ಧರಲ್ಲಿ ಕನ್ಯಾಪರೀಕ್ಷೆಗಿಂತ ವರಪರೀಕ್ಷೆ ಬಹು ಮುಖ್ಯವಾಗಿದೆ. ಜೀವನ ಸಂಗಾತಿಗಳ ಆಯ್ಕೆಯಲ್ಲಿ ಅವರು ಅನುಸರಿಸುವ ಪದ್ಧತಿ ಇತರರಿಗಿಂತ ತೀರ ಭಿನ್ನ ಹಾಗೂ ವಿಚಿತ್ರವಾಗಿದೆ. ಸಾಮಾನ್ಯವಾಗಿ ಗಂಡು ಹೆಣ್ಣಿನ ಒಪ್ಪಿಗೆಯನ್ನು ಅವರು ಕೇಳುವುದಿಲ್ಲ. ಸಿದ್ಧರಲ್ಲಿ ಮದುವೆಯಾಗಬಯಸುವ ಗಂಡು, ಹೆಣ್ಣು ಬೇಕೆನಿಸಿದಾಗ ಅತ್ತೆ ಮಾವಂದಿರೊಂದಿಗೆ ಕನಿಷ್ಠ ಒಂದು ವರ್ಷದವರೆಗೆ ವಾಸಮಾಡಬೇಕು. ಈ ಅವಧಿಯಲ್ಲಿ ಅತ್ತೆ ಮಾವಂದಿರು ಗಂಡಿನ ಗುಣ ಪರೀಕ್ಷೆ ಮಾಡುತ್ತಾರೆ. ಅತ್ತೆ ಮಾವಂದಿರ ಜೊತೆಯಲ್ಲಿದ್ದುಕೊಂಡು ಅವರು ಹೋದಕಡೆಯಲ್ಲೆಲ್ಲಾ ಸಂಚರಿಸಬೇಕು. ಇದಕ್ಕೆ ಅವರು ತೆಲುಗಿನಲ್ಲಿ ಮೇರ ತಿರುಗುವುದು ಎನ್ನುತ್ತಾರೆ. ಈ ಸಮಯದಲ್ಲಿ ಅಳಿಯನಾದವನು ಊರಲ್ಲಿ ಭಿಕ್ಷಾಟನೆ ಮಾಡಬೇಕು. ದನಕರುಗಳಿಗೆ ಮೇವು ನೀರು ಹಾಕಬೇಕು, ಮನೆ ಕೆಲಸಗಳನ್ನೆಲ್ಲ ಅತ್ಯಂತ ನಿಷ್ಠೆಯಿಂದ ಮಾಡಿ ತೋರಿಸಬೇಕು. ಕಟ್ಟಿಗೆ ಕಡಿಯಬೇಕು, ನೀರು ತರಬೇಕು, ಒಟ್ಟಿನಲ್ಲಿ ಅತ್ತೆ ಮಾವಂದಿರು ಹೇಳುವುದನ್ನೆಲ್ಲಾ ಮಾಡಿ ತೋರಿಸಬೇಕು. ಗಂಡು ಸಂಸಾರ ಮಾಡಲು ಸಮರ್ಥನೆಂದು ಕಂಡುಬಂದಲ್ಲಿ ಮಾತ್ರ ಅತ್ತೆ ಮಾವಂದಿರು ಹೆಣ್ಣು ಕೊಡಲು ಒಪ್ಪಿಗೆ ಸೂಚಿಸುತ್ತಾರೆ. ಅವನೇನಾದರೂ ಅಸಮರ್ಥನೆಂದು ಕಂಡುಬಂದಲ್ಲಿ ಹೆಣ್ಣುಕೊಡಲು ನಿರಾಕರಿಸುತ್ತಾರೆ. ಇಂಥ ಸಂದರ್ಭಗಳಲ್ಲಿ ಒಂದು ವರ್ಷದವರೆಗೆ ಅವರೊಂದಿಗಿದ್ದು, ಸಂಪಾದಿಸಿದ್ದರಲ್ಲಿ ಅರ್ಧಪಾಲನ್ನು ಅವನಿಗೆ ಕೊಟ್ಟು ಅವನ ತಂದೆ ತಾಯಿಯಲ್ಲಿಗೆ ಕಳಿಸಿಬಿಡುತ್ತಾರೆ. ಗಂಡು

ಸಮರ್ಥನೆಂಬುದನ್ನು ಕಂಡು ಅತ್ತೆ ಮಾವಂದಿರು ಹೆಣ್ಣು ಕೊಡಲು ಸೂಚಿಸಿದಾಗ, ಗಂಡಿನವರು ಹೆಣ್ಣಿನ ಮನೆಯ ಮುಂದೆ ಚಾಪೆ ಹಾಕುತ್ತಾರೆ. ಚಾಪೆ ಹಾಕುವುದೆಂದರೆ ಸಿದ್ಧರಲ್ಲಿ ಮದುವೆ ನಿಶ್ಚಯವಾಯಿತು ಎಂದರ್ಥ. ಮದುವೆ ನಿಶ್ಚಯವಾದಂದಿನಿಂದ ಮದುವೆಯಾಗುವವರೆಗೆ ಗಂಡು ಹೆಣ್ಣಿಗೆ ಬೇಕಾಗುವ ಬಟ್ಟೆ ಬರೆಗಳನ್ನು ಕೊಡಿಸಬೇಕು ಸುಡುಗಾಡು ಸಿದ್ಧರಲ್ಲಿ ಹಿಂದೆ ಮದುವೆ ಸಮಾರಂಭ ಐದು ದಿನಗಳವರೆಗೆ ನಡೆಯುತ್ತಿತ್ತು. ಈಗ ಕಾಲ ಬದಲಾಗಿದೆ. ಇತರರಂತೆ–ಅವರೂ ಸಹ ಒಂದೇ ದಿನದಲ್ಲಿ ಮದುವೆ ನೆರವೇರಿಸುತ್ತಾರೆ. ಲಗ್ನವಾದ ಮೇಲೆ ಗಂಡು ಹೆಂಡತಿ ಜೊತೆಯಲ್ಲಿ ಅತ್ತೆ ಮಾವನೊಂದಿಗೆ ಮೂರು ವರ್ಷಗಳವರೆಗೆ ಜೀವನ ಮಾಡಬೇಕೆಂಬ ನಿಯಮವಿತ್ತು. ಆದರೆ ಇಂದು ಆ ನಿಯಮ ಸಡಿಲವಾಗಿದೆ. ಹಿಂದೆ ತಾಳಿ ಸ್ಥಾನದಲ್ಲಿ ರುದ್ರಾಕ್ಷಿ ಕಟ್ಟುತ್ತಿದ್ದರು ಆದರೆ ಇಂದು ತಾಳಿ ಕಟ್ಟುತ್ತಾರೆ.

ಮದುವೆ ಕಾರ್ಯ ಹೆಣ್ಣಿನವರ ಮನೆಯಲ್ಲಿಯೇ ನಡೆಯುತ್ತದೆ. ಮದುವೆ ಗಂಡು ಹೆಣ್ಣಿನ ಮನೆಯ ಮುಂದೆ ಚಾಪೆ ಹಾಕಿ ದೈವದವರನ್ನು ಆಮಂತ್ರಿಸುತ್ತಾರೆ. ಇಲ್ಲಿಂದಲೇ ಸಾಮಾನ್ಯವಾಗಿ ಅವರ ಮದುವೆ ಕಾರ್ಯಗಳೆಲ್ಲಾ ಆರಂಭಗೊಳ್ಳುತ್ತವೆ. ಮದುವೆ ಹಂದರವನ್ನು ಹನ್ನೆರಡು ಕಂಬಗಳಿಂದ ಹಾಕಿರುತ್ತಾರೆ. ಇವರ ಮದುವೆ ಶಾಸ್ತ್ರವು ಬ್ರಾಹ್ಮಣ ಪುರೋಹಿತರಿಂದ ನಡೆಯುತ್ತದೆ. ಮದುಮಗನಿಗೆ ಶಾಸ್ತ್ರ ಮಾಡುವಾಗ ಹಸೆ ಬರೆದು ಕೂಡಿಸಬೇಕಾದರೆ ಬಲಗಾಲಿನ ಬೆರಳಿಗೆ ಬೆಳ್ಳಿಯ ಮಿಂಚು ಹಾಕಿ, ಕೈಯಲ್ಲಿ ಕತ್ತಿ, ಅದಕ್ಕೊಂದು ನಿಂಬೆ ಹಣ್ಣು  ಚುಚ್ಚಿದ್ದು, ವಸ್ತ್ರದಲ್ಲಿ ಕಾಯಿ ಕೆಳಗೆ ಜೋಳಿಗೆ ಹಾಕುವುದೇ ಇವರ ಸಂಪ್ರದಾಯ. ಬಳಪದ ಕಲ್ಲಿನಿಂದ ಲಿಂಗ ಮಾಡಿ ಕೆಂಪು ವಸ್ತ್ರ ಕೈಯಲ್ಲಿಟ್ಟು ಲಿಂಗಕ್ಕೆ ಅಕ್ಷತೆ ಗಂಧ ಹಾಕಿ ಪೂಜೆ ಮಾಡುತ್ತಾರೆ. ಈ ಲಿಂಗದಾರಣೆ ಪೂಜೆ ಮುಗಿಸಿ ನಂತರ ಅದನ್ನು ಬಲ ತೋಳಿಗೆ ಕಟ್ಟುತ್ತಾರೆ. ಒಂದೇ ಜಾತಿಯ ಸೌದೆ ಹಾಕಿ ಬೆಂಕಿಮಾಡಿ ಹಾಲು ಉಕ್ಕಿಸುತ್ತಾರೆ. ಅರಿಷಿಣೆಣ್ಣೆ ಸ್ನಾನದ ನಂತರ ಮದುಮಗನಿಗೆ, ಸಂಬಂಧಿಕರೆಲ್ಲ ಬಾಳೆಹಣ್ಣು, ತುಪ್ಪ, ಬೆಲ್ಲವನ್ನು ಒಂದೊಂದು ತುತ್ತು ಕೊಡುತ್ತಾರೆ. ನಂತರ ಬೀರಕ್ಕಿ ಶಾಸ್ತ್ರಮಾಡಿ ಧಾರೆ ಚಪ್ಪರದಡಿ ಪಂಚ ಕಳಶ ಮಾಡಿ ಸುರಿಗೆ ಸುತ್ತಿ ಅರಿಶಿಣ ಕೊಂಬು, ಎಲೆ, ಕೈಗೆ ಕಂಕಣ ಕಟ್ಟಿ, ಮಾಂಗಲ್ಯ ಕಾಯಿಯನ್ನೂ ಎಲ್ಲರಿಂದ ಮುಟ್ಟಿಸಿ ನಮಸ್ಕರಿಸಿ ಮದುಮಗಳಿಗೆ ಕಟ್ಟಿಸುತ್ತಾರೆ.

ಮದುವೆ ಮುಗಿಯುವವರೆಗೆ ಸೇಂದಿ, ಸಾರಾಯಿ, ಮಾಂಸದ ಊಟ ಮೊದಲಾದ ಖರ್ಚನ್ನು ಗಂಡಿನವರೇ ನೋಡಿಕೊಳ್ಳಬೇಕು. ಮದುವೆಯಾದ ಮೂರು ದಿನಕ್ಕೆ ಕೋಳಿ, ಕುರಿ ಬಲಿಕೊಟ್ಟು ಬಂಧು–ಬಳಗದವರಿಗೆಲ್ಲ ಊಟ ಹಾಕಿಸಬೇಕು.

ಸುಡುಗಾಡು ಸಿದ್ಧರಲ್ಲಿ ಕೂಡಾವಳಿ ಮದುವೆ, ಬಾಲ್ಯವಿವಾಹ, ವಿಧವಾ ವಿವಾಹ ಮೊದಲಾದ ವಿವಾಹ ಪದ್ಧತಿಗಳು ಜಾರಿಯಲ್ಲಿವೆ. ಸಿದ್ಧರಲ್ಲಿ ಮಹಿಳೆಯು ಜೀವನದುದ್ದಕ್ಕೂ  ಅವಿವಾಹಿತೆಯಾಗಿ ಉಳಿಯಬಹುದೇ ಹೊರತು ಬಸವಿಯಾಗಲಾರರು. ಇನ್ನುಳಿದ ಜನಾಂಗಗಳಲ್ಲಿರುವಂತೆ, ಸಿದ್ಧರಲ್ಲಿಯೂ ವಿವಾಹ ವಿಚ್ಛೇದನ ಸಾಂಪ್ರದಾಯಿಕವಾಗಿದೆ. ಗಂಡ ಸತ್ತ ನಂತರ ಹೆಣ್ಣು ಇಷ್ಟಪಟ್ಟಲ್ಲಿ ಮಾತ್ರ ಯಾರನ್ನಾದರೂ ಮದುವೆ ಮಾಡಿಕೊಳ್ಳಬಹುದು.

**ಸೀಮಂತ ಕಾರ್ಯ**

ಸುಡುಗಾಡು ಸಿದ್ಧರು ಇತರರಂತೆ ಮದವೆಯಾದ ಹೆಣ್ಣು ಮೊದಲು ಗರ್ಭಿಣಿಯಾದಾಗ ಸಾಮಾನ್ಯವಾಗಿ ಐದು ಇಲ್ಲವೇ ಏಳು ತಿಂಗಳಲ್ಲಿ ಸೀಮಂತ ಕಾರ್ಯವನ್ನು ಮಾಡುತ್ತಾರೆ. ಹೆಣ್ಣಿನ ತವರಿನವರು ಗಂಡಿನ ಮನೆಗೆ ಬಂದು ಈ ಶಾಸ್ತ್ರವನ್ನು ಮಾಡುತ್ತಾರೆ. ಹಟ್ಟಿಯ ಜನರಿಗೆಲ್ಲ ಆ ದಿನ ಸಿಹಿ ಊಟ ಹಾಕಿಸುತ್ತಾರೆ. ತವರಿನವರು ಈ ಶಾಸ್ತ್ರಕ್ಕಾಗಿ ಬರುವಾಗ ಒಂದು ಹಸಿರು ಸೀರೆ, ಹಸಿರು ಬಳೆ, ಅಕ್ಕಿ, ಗೋದಿ, ಬೆಲ್ಲ, ಕೊಬ್ಬರಿ, ಉತ್ತತ್ತಿ, ತೆಂಗು, ಬಾಳೆಹಣ್ಣು, ಅರಿಷಿಣ, ಕುಂಕುಮ ಹೂವು ಇತ್ಯಾದಿ ಸಾಮಾನುಗಳನ್ನು ತರುತ್ತಾರೆ. ಮುತ್ತೈದೆಯರು ಸೇರಿ ಗರ್ಭಿಣಿಗೆ ಹೊಸ ಸೀರೆ, ಕುಪ್ಪಸ ತೊಡಿಸಿ ಹೂ ಮುಡಿಸಿ ಉಡಿ ತುಂಬುತ್ತಾರೆ. ಈ ಶಾಸ್ತ್ರವಾದ ಮೇಲೆ ಅವರು ಹೆಣ್ಣನ್ನು ತವರಿಗೆ ಕರೆದುಕೊಂಡು ಹೋಗುತ್ತಾರೆ.

**ಶವಸಂಸ್ಕಾರ ಪದ್ಧತಿ**

ಪ್ರತಿಯೊಂದು ಸಮುದಾಯದಲ್ಲಿ ಹುಟ್ಟಿದ ವ್ಯಕ್ತಿಗೆ ಕೆಲವು ಆಚರಣೆ, ವಿಧಿವಿಧಾನಗಳನ್ನು ಮಾಡುವಂತೆ ಮರಣ ಹೊಂದಿದಾಗ ಕೆಲವು ವಿಧಿ-ವಿಧಾನಗಳನ್ನು ಮಾಡುತ್ತಾರೆ. ವ್ಯಕ್ತಿ ಸತ್ತ ಮೇಲೆ ತಿಥಿ ಮಾಡುವ ಸಂಪ್ರದಾಯ ಪ್ರತಿಯೊಂದು ಸಮಾಜದಲ್ಲಿಯೂ ಕಂಡುಬರುತ್ತದೆ. ಸುಡುಗಾಡು ಸಿದ್ಧರಲ್ಲಿ ಹೂಳುವ ಮತ್ತು ಸುಡುವ ಎರಡೂ ಪದ್ಧತಿಗಳಿವೆ. ಗರ್ಭಿಣಿ, ಬಾಣಂತಿ, ತೊನ್ನು ಇದ್ದವರನ್ನು ಮತ್ತು ಅನುಮಾನಾಸ್ಪದವಾದ ಸಾವುಗಳು ಸಂಭವಿಸಿದೆಲ್ಲಾ ಶವಗಳನ್ನು ಸಾಮಾನ್ಯವಾಗಿ ಸುಡುತ್ತಾರೆ. ಉಳಿದಂತೆ ಎಲ್ಲ ಹೆಣಗಳನ್ನು ಹೂಳುತ್ತಾರೆ. ಸುಡುಗಾಡು ಸಿದ್ಧರಲ್ಲಿ ಸ್ಮಶಾನ ಸಾಮಾನ್ಯವಾಗಿ ದಕ್ಷಿಣ ದಿಕ್ಕಿನಲ್ಲಿರುತ್ತದೆ. ಹೆಣವನ್ನು ಸ್ಮಶಾನಕ್ಕೆ ಒಯ್ಯುವಾಗ ಹಲಗೆ, ಶಹನಾಯಿ ಮೊದಲಾದವುಗಳನ್ನು ಬಾರಿಸುವುದಿಲ್ಲ. ಹೆಣ ಒಯ್ಯುವಾಗ ಹಾಡು, ಮಂತ್ರ ಇತ್ಯಾದಿಗಳನ್ನು ಹೇಳುತ್ತಾರೆ. ಏಳು ಪಾದ ಎಣಿಸಿ ಅಳತೆ ಹಾಕಿ ದಕ್ಷಿಣೋತ್ತರವಾಗಿ ಕುಣಿ ತೆಗೆಯುತ್ತಾರೆ. ಊರ ಹೊರಗೆ ಸತ್ತವನ ಹೆಣವನ್ನು ಅವರು ಊರೊಳಗೆ ತರುವುದಿಲ್ಲ. ಅಂಥವರನ್ನು ಅದೇ ಪ್ರದೇಶದಲ್ಲಿ ಸಂಸ್ಕಾರ ಮಾಡಿ ಬರುತ್ತಾರೆ.

ವ್ಯಕ್ತಿಯು ಮರಣಿಸಿದ ನಂತರ ಬಿಸಿನೀರಿನ ಸ್ನಾನ ಮಾಡಿಸಿ ವಿಭೂತಿ ರುದ್ರಾಕ್ಷಿ, ಕಾವಿ, ಕಮಂಡಲಗಳಿಂದ ಅಲಂಕರಿಸುತ್ತಾರೆ. ಶವದ ಬಾಯಲ್ಲಿ ಎಲೆ, ಅಡಿಕೆ, ತಾಂಬೂಲ ಇಟ್ಟು ಮುಂದೆ ಪಂಚಕಳಶವನ್ನಿಟ್ಟು ದೀಪ ಉರಿಸಿ ಬಂಧು ಬಳಗದವರೆಲ್ಲ ಬಂದು ನಮಸ್ಕರಿಸುತ್ತಾರೆ. ಹಿಂದೆ ಹೆಣವನ್ನು ಕವದಿ ಇಲ್ಲವೆ ಚಾಪೆ ಸುರುಳಿಯಲ್ಲಿ ಸುತ್ತಿ ಉದ್ದವಾದ ಕೋಲಿಗೆ ಚಟ್ಟಕಟ್ಟಿ ಸ್ಮಶಾನಕ್ಕೆ ಒಯ್ಯುತ್ತಿದ್ದರು. ಈಗ *ಸಿದಿಗೆ* ಕಟ್ಟಿ ಒಯ್ಯುವ ವ್ಯವಸ್ಥೆ ಇದೆ.

ಶವವನ್ನು ಸ್ಮಶಾನಕ್ಕೆ ಒಯ್ಯುವಾಗ ಮಣ್ಣಿನ ಮಡಕೆಯಲ್ಲಿ ಅರ್ಧ ಬೆಂದ ಅನ್ನಕ್ಕೆ ಅರಿಷಿಣ ಹಾಕಿ ಮರಣಿಸಿದ ವ್ಯಕ್ತಿಯ ಹಿರಿಯ ಮಗನು ಒಂದು ಕೈಯಲ್ಲಿ ಮಡಿಕೆಯನ್ನು ಹಿಡಿದುಕೊಂಡು ಇನ್ನೊಂದು ಕೈಯಲ್ಲಿ ಕುಡುಗೋಲನ್ನು ಹಿಡಿದುಕೊಂಡು ಮುಂದೆ ಸಾಗುತ್ತಾನೆ. ಸ್ಮಶಾನ ಸಮೀಪಿಸುತ್ತಿದ್ದಂತೆ ಹೆಣ ಇಳಿಸಿ ಅನ್ನದ ಮಡಿಕೆಯನ್ನು ಬೋರಲಾಗಿ ಹಾಕಿ ಎಡಗೈಯಲ್ಲಿ ಕುಡುಗೋಲನ್ನು ಹಿಡಿದು ಅದನ್ನು

ಪುಡಿಪುಡಿಯಾಗುವಂತೆ ಒಡೆದು ಹಾಕುತ್ತಾನೆ. ಗ್ರಹಗತಿ, ದೆವ್ವವಾಗಿ ಹಿಂತಿರುಗಿ ಬರಬಾರದೆಂಬುದೇ ಅವರ ನಂಬಿಕೆಯಾಗಿದೆ.

ಹೆಣವನ್ನು ಉತ್ತರಕ್ಕೆ ಕಾಲು ಮಾಡಿ ದಕ್ಷಿಣಕ್ಕೆ ತಲೆ ಮಾಡಿ ಕುಣಿಯಲ್ಲಿಟ್ಟು, ಹಣೆಗೆ ವಿಭೂತಿ ಹಚ್ಚಿ, ಮಗ್ಗಲು ಮಾಡಿದಲ್ಲಿ ದೀಪ ಬೆಳಗಿಸಿ, ಹಣ್ಣು, ಕಾಯಿ, ಲೋಬಾನ ಹಾಕಿ ಪೂಜಿಸಿ ಮಣ್ಣು ಎಳೆಯುತ್ತಾರೆ. ಶವವನ್ನು ಹೂಳಿದ ಮೇಲೆ ತಲೆ, ಕಾಲು, ಮತ್ತು ಮಧ್ಯಭಾಗದ ಕಡೆಯಲ್ಲಿ ಒಂದೊಂದು ಚಿಕ್ಕ ಕಲ್ಲುಗಳನ್ನಿಟ್ಟು ಪೂಜಿಸಿ ಹಿಂದಿರುಗುತ್ತಾರೆ.

ಶವಸಂಸ್ಕಾರಕ್ಕೆಂದು ಹೋದ ಜನರು ಸಮೀಪದ ಹಳ್ಳಕ್ಕೆ ಹೋಗಿ ಸ್ನಾನಮಾಡಿ ತಿರುಗಿ ಬರುವಾಗ ದಾರಿಯಲ್ಲಿ ದೇವರು ದರ್ಶನ ಮಾಡಿಕೊಂಡು ನೇರವಾಗಿ ಹೆಂಡದಂಗಡಿಗೆ ಹೋಗಿ ಸಾಕಷ್ಟು ಕುಡಿದು ಸತ್ತವರ ಮನೆಗ ಬಂದು ದೀಪ ನೋಡಿ ತಮ್ಮ ತಮ್ಮ ಮನೆಗಳಿಗ ತೆರಳುತ್ತಾರೆ. ಹಟ್ಟಿಯ ಜನ ಸತ್ತವರ ಮನೆಗೆ ತಿಥಿ ಮಾಡುವ ದಿನಗಳವರೆಗೆ ಊಟ ತಂದು ಕೊಡುತ್ತಾರೆ.

**ತಿಥಿ ಮಾಡುವುದು**

ಸತ್ತ ಮೂರು ದಿನಕ್ಕೆ ತಿಥಿ ಮಾಡುವ ಕಾರ್ಯವಿರುತ್ತದೆ. ತುಂಬಾ ವಿಶಿಷ್ಟವಾಗಿ ಆಚರಣೆ ಮಾಡುತ್ತಾರೆ. ಅಂದು ಬೆಳಗಿನ ಜಾವದಲ್ಲಿ ವ್ಯಕ್ತಿ ಪ್ರಾಣಬಿಟ್ಟ ಸ್ಥಳದಲ್ಲಿ ನೀರಿನ ತಂಬಿಗೆಯನ್ನಿಟ್ಟು, ಕೋಳಿಯೊಂದನ್ನು ತಂದು ಅದರ ಕುತ್ತಿಗೆಯನ್ನು ಆ ನೀರಿನಲ್ಲಿ ಮುಳುಗಿಸಿ, ಅದು ಪ್ರಾಣ ಬಿಡುವವರಗೆ ಹಾಗೆಯೇ ಹಿಡಿದುಕೊಳ್ಳುತ್ತಾರೆ. ನಂತರ ಆ ಕೋಳಿ ಮಾಂಸದ ಅಡುಗೆ ಮಾಡಿಕೊಂಡು, ಎಡೆಗೆ ಅನ್ನವನ್ನು ತೆಗೆದುಕೊಂಡು, ಮರಣಿಸಿದ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ತಿನ್ನುತ್ತಿದ್ದ ಮತ್ತು ಅವನಿಗೆ ಇಷ್ಟವಾದ ಎಲ್ಲ ಬಗೆಯ ಆಹಾರ ಪದಾರ್ಥಗಳನ್ನು ಸಂಗ್ರಹಿಸಿಕೊಂಡು ಸ್ಮಶಾನಕ್ಕೆ ಬರುತ್ತಾರೆ. ಹೀಗೆ ಬರುವಾಗ ಘಂಟೆಯ ವಾಲೀಕಾರನು ಘಂಟೆ ಬಾರಿಸುತ್ತ ಮುಂದೆ, ಇತರರು ಆ ಎಡೆ ಹಿಡಿದುಕೊಂಡು ಅವನ ಹಿಂದೆ ಸಾಗುತ್ತಾರೆ. ಶವಸಂಸ್ಕಾರ ಮಾಡಿದ ಸ್ಥಳದಲ್ಲಿ ಶವದ ತಲೆಯ ಭಾಗದ ಕಡೆಗೆ ಒಂದು ಚಿಕ್ಕ ಗುಂಡಿ ತೆಗೆದು ಅದರಲ್ಲಿ ಕೋಳಿ ಮಾಂಸದ ಒಂದಿಷ್ಟು ಎಡೆ ಹಾಗೂ ಆ ವ್ಯಕ್ತಿಯ ಇಷ್ಟಾರ್ಥ ಪದಾರ್ಥಗಳನ್ನು ಹಾಕಿ ಮಣ್ಣು ಮುಚ್ಚುತ್ತಾರೆ. ಹೀಗೆ ಮಣ್ಣು ಮುಚ್ಚಿದ ಮೇಲೆ ಅದರ ಮೇಲೊಂದು ಹೊಸ ಮಡಿಕೆ ಇಟ್ಟು ವಾಲೀಕಾರನಿಂದ ಅದಕ್ಕೆ ತೂತು ಹಾಕಿಸುತ್ತಾರೆ. ಮರಣಿಸಿದ ವ್ಯಕ್ತಿಯು ಇಚ್ಚಿಸುತ್ತಿದ್ದ ಪಾನೀಯ ಮತ್ತು ನಿಶೆಯ ವಸ್ತುಗಳನ್ನು ಶವ ಸಂಸ್ಕಾರ ಮಾಡಿದ ಸ್ಥಳದ ಮೇಲೆ ಹಾಕಿ ಊದುಬತ್ತಿ ಹಚ್ಚಿ, ಗಂಟೆ ಬಾರಿಸಿ, ಶಂಖನಾದ ಮಾಡಿಸುತ್ತಾರೆ. ಎಡೆಯಲ್ಲಿ ಉಳಿದ ಅರ್ಧ ಭಾಗವನ್ನು ಹತ್ತಿರದ ಹಳ್ಳಕ್ಕೆ ಒಯ್ದು, ನೀರಿನಲ್ಲಿ ತಗ್ಗು ತೆಗೆದು ಅದರಲ್ಲಿಟ್ಟು ಪೂಜೆ ಮಾಡಿ ಕಲ್ಲಿನಿಂದ ಮುಚ್ಚಿ ಅದರ ಮೇಲೆ ನೀರು ಹರಿಯುವಂತೆ ಮಾಡುತ್ತಾರೆ ಹಾಗೇಯೇ ಹಳ್ಳದ ದಂಡೆಯಲ್ಲಿ ಐದು ಲಿಂಗಗಳನ್ನು ಮಾಡಿ, ವಿಭೂತಿ ಕುಂಕುಮ ಹಚ್ಚಿ ಲೋಬಾನ ಇಟ್ಟು ಧೂಪ ಹಾಕಿ ಲಿಂಗಪೂಜೆ ಮಾಡುತ್ತಾರೆ. ಘಂಟೆಯ ವಾಲೀಕಾರನು ಎಡಗೈ ಹೆಬ್ಬರಳಿನಿಂದ ಎಲ್ಲರಿಗೂ ವಿಭೂತಿ ಹಚ್ಚುತ್ತಾನೆ. ಈ ಕಾರ್ಯಕ್ಕೆಂದು ಬಂದಿರುವ ಹಿರಿಯರೊಬ್ಬರ ಪಾದದ ಮೇಲೆ ಒಂದು ತಾಮ್ರದ ದುಡ್ಡನ್ನಿಟ್ಟು, ಅದು ಕೆಳಗೆ ಬೀಳದಂತೆ ವಾಲೀಕಾರ ಎತ್ತಿಕೊಂಡು ಘಂಟೆ, ಶಂಖನಾದ ಮಾಡಬೇಕು. ನಂತರ ಎಲ್ಲರೂ ಸತ್ತವನ ಮನೆಯ ಮುಂದುಗಡೆ ಬಯಲಿನಲ್ಲಿ ಮಾಡುತ್ತಾರೆ. ಈ ಕಾರ್ಯಕ್ಕೆ ಬಂದವರೆಲ್ಲರೂ

ಕೋಳಿ ಸಾರನ್ನು ಸ್ವೀಕರಿಸುವಾಗ 'ನೀರ ಬಾಲ ಹನುಮಂತ' ಎಂದು ಕೂಗುತ್ತಾರೆ. ನಂತರ ಎಲ್ಲರೂ ಹೆಂಡದಂಗಡಿಗೆ ಹೋಗುತ್ತಾರೆ. ರಾತ್ರಿ ಬಳಗದವರು ಮತ್ತು ಇತರ ಬೆಡಗಿನವರು ಒಂದೊಂದು ಬಾಟ್ಲಿ ಸರಾಯಿ ತಂದು ಮೃತರ ಕುಟುಂಬದವರಿಗೆ ಕೊಟ್ಟು ಬಳಗವನ್ನೆಲ್ಲ ಸೇರಿಸುತ್ತಾರೆ.

ಒಂಭತ್ತನೆಯ ದಿನದಲ್ಲಿ ಮೃತನ ಮನೆಯನ್ನು ಸಾರಣೆ ಮಾಡಿ, ಆ ದಿನ ಸಿಹಿ ನೈವೇದ್ಯ ಮಾಡಿ ಮನೆಯ ಹೊರಗಿಟ್ಟು ಸತ್ತ ವ್ಯಕ್ತಿಯನ್ನು ಕೂಗುತ್ತಾರೆ. ನಂತರ ಬಳಗದವರಿಗೆಲ್ಲ ಸಿಹಿ ಊಟ ಹಾಕಿ ಕಳಿಸುತ್ತಾರೆ. ಹದಿನಾರನೆ ದಿನಕ್ಕೆ ಮನೆಯ ಅಂಗಳದಲ್ಲಿ ಸಾರಣೆ ಮಾಡಿ ಸಗಣಿಯಿಂದ ಕಟ್ಟೆ ಕಟ್ಟಿ ನೀರು ನಿಲ್ಲುವಂತೆ ಮಾಡಿ ಅದರಲ್ಲಿ ಕಾಲಿಟ್ಟು ಹಿಂದು ಮುಂದಕ್ಕೆ ನಡೆದು ಮನೆ ಪ್ರವೇಶ ಮಾಡುತ್ತಾರೆ. ಇದು ಭಾರ ಇಳಿಸುವ ಕಾರ್ಯವಾದ್ದರಿಂದ ದೊಡ್ಡದೊಂದು ಕುರಿಕೊಯ್ದು ಸಮಾಜದವರನ್ನು ಆಹ್ವಾನಿಸಿ ಎಲ್ಲರಿಗೂ ಊಟ ಕೊಡುತ್ತಾರೆ, ಕುಡಿಯಲು ಹೆಂಡ ಕೊಡುತ್ತಾರೆ. ಪ್ರತಿಯೊಬ್ಬರು ಈ ಸಂದರ್ಭದಲ್ಲಿ ಹೆಂಡ ಕುಡಿಯಬೇಕು. ಕುಡಿಯದವರು ಹೆಂಡವನ್ನು ಮೈಮೇಲೆ ಸ್ವಲ್ಪ ಸಿಂಪಡಿಸಿಕೊಳ್ಳುತ್ತಾರೆ.

**ಮಸಣವೇ ದೇವರು**

ಮಸಣದ ಒಡೆಯರಾದ ಸಿದ್ಧರು ಶವಸಂಸ್ಕಾರಕ್ಕೆ ಬಂದಿರುವ ಇತರರಿಂದ ದಾನ ಪಡೆಯುವ ಹಕ್ಕನ್ನು ಪಡೆದಿರುತ್ತಾರೆ. ಈ ಬಗೆಯ ಹಕ್ಕನ್ನು ತಾಲೂಕಿನ ಧರ್ಮಾಧಿಕಾರಿ ಇಲ್ಲವೇ ಶ್ರೀಶೈಲ ಪೀಠದ ಗುರುಗಳಿಂದ ಪಡೆದಿರುತ್ತಾರೆ. ಇದಕ್ಕಾಗಿ ಅವರು ಪ್ರತಿವರ್ಷ 101 ರೂಪಾಯಿಗಳನ್ನು ಶ್ರೀಶೈಲ ಪೀಠಕ್ಕೆ ಸಲ್ಲಿಸುತ್ತಾರೆ. ಅದರಂತೆ ಶವಸಂಸ್ಕಾರಕ್ಕೆ ಬರುವ ಬೇರೆ ಬೇರೆ ಜಾತಿಯವರಿಂದ ಬೇರೆ ಬೇರೆ ರೀತಿಯಲ್ಲಿ ರಿವಾಜು ದಾನವನ್ನು ಪಡೆದುಕೊಳ್ಳುತ್ತಾರೆ, ಸ್ವಾಮಿ ಸಾವಿನ ಸಂಸ್ಕಾರಕ್ಕೆ ಒಂದು ಆಕಳು, ಲಿಂಗಾಯಿತನಿಗೆ 25 ರೂಪಾಯಿಗಳು, ಕುರುಬನಿಗೆ ಒಂದು ಕುರಿ, ಹೊಲೆಮಾದಿಗರಿಗೆ ಮತ್ತು ಕಬ್ಬಲಿಗರಿಗೆ ಕಡ್ಡಾಯವಿಲ್ಲ ಹೀಗೆ ರಿವಾಜು ದಾನವನ್ನು ಪಡೆದುಕೊಳ್ಳುತ್ತಾರೆ. ಹಿಂದೆ ಭೂಮಿ ಕಾಣಿಕೆಯಾಗಿ 5 ಪೈಸೆ ಸಲ್ಲಿಕೆ ಕಾಣಿಕೆಯಾಗಿ 10 ಪೈಸೆ ಬುಟ್ಟಿ ಕಾಣಿಕೆಯಾಗಿ 10 ಪೈಸೆ ತಗೆದುಕೊಳ್ಳುತ್ತಿದ್ದರು ಆದರೆ ಈಗ ಅದು ರೂಪಾಯಿಗಳಲ್ಲಿ ಮಾರ್ಪಾಡಾಗಿದೆ.

ಸಿದ್ಧನು ಮಸಣದ ಒಂದು ಸಮಾಧಿಯ ಸ್ಥಳದಲ್ಲಿ ಕೆಂಪು ದ್ವಜ (ಎಚ್ಚರಿಕೆಯ ಸಂಕೇತ) ವನ್ನು ಊರುತ್ತಾನೆ. ಮದ್ಯರಾತ್ರಿಯಲ್ಲಿ ಒಬ್ಬನೆ ಊರುವ ಕದಲು ಬೆಳಕಿನಲ್ಲಿ ಸಮಾಧಿಯ ಮೇಲೆ ಅರಿಷಿಣ ಕುಂಕುಮದ ರಂಗೋಲಿ ಹಾಕುತ್ತಾನೆ. ಸ್ಮಶಾಣದಲ್ಲಿಯೇ ಇರುವ ಚಟ್ಟದ ಕಟ್ಟಿಗೆಗಳಿಂದ ಅಡಿಗೆ ಮಾಡಿ ಎಡೆ ಮಾಡುತ್ತಾನೆ. ಶಂಖ, ಜಾಗಟೆ, ಮಂತ್ರ ಘೋಷಣೆಗಳೊಂದಿಗೆ ಭಯಾನಕ ಪೂಜೆಯಿಂದ ಮಾರಿ ಮಸಣದ ಭೂತಗಳೆಲ್ಲಾ ಓಡುತ್ತವೆ ಎಂಬ ನಂಬಿಕೆ ಇಂದಿಗೂ ಹಳ್ಳಿಗಳಲ್ಲಿದೆ.

**ಧಾರ್ಮಿಕ ಆಚರಣೆ ಮತ್ತು ಕಲೆ**

ಸುಡುಗಾಡು ಸಿದ್ಧರು ಮೂಲತಃ ಶೈವರಾದರೂ ವಿಷ್ಣು ಪೂಜಕರು. 'ವೀರಭದ್ರ' ಅವರ ವಿಶೇಷ ದೇವರು, ಗಂಗಮ್ಮ ದೇವರು ಸ್ತ್ರೀಯರಿಂದ ಪೂಜಿಸಲ್ಪಡುವ ದೇವತೆಯಾಗಿದ್ದು. ಅವಳಿಗೆ ಕುರಿ ಬಲಿಯನ್ನು ಅರ್ಪಿಸುತ್ತಾರೆ. ಸೋಮವಾರ ದಿನ ಸಿದ್ಧರ ಸ್ತ್ರೀಯರು ಇಡೀ ದಿನ ಉಪವಾಸ ವ್ರತವನ್ನು ಕೈಗೊಂಡು

ಶಿವಲಿಂಗವನ್ನು ಪೂಜಿಸುತ್ತಾರೆ. ಅವರು ಧಾರ್ಮಿಕ ಉದ್ದೇಶಗಳಿಗಾಗಿ ಒಂದಿಷ್ಟು ಹಣವನ್ನು ಚಿಕ್ಕ ಚೀಲದಲ್ಲಿ ಹಾಕಿ ಮುಡುಪಾಗಿ ಇಡುತ್ತಾರೆ. ಧಾರ್ಮಿಕ ಕಾರ್ಯಗಳಿಗೆ ಬ್ರಾಹ್ಮಣರನ್ನು ನಿಯಮಿಸುವುದಿಲ್ಲ.

ಈ ಸಿದ್ಧರು ನಡೆದುಕೊಳ್ಳುವ ದೇವರೆಂದರೆ ತಿರುಪತಿ ತಿಮ್ಮಪ್ಪ, ಅಂತರಗಟ್ಟೆಮ್ಮ, ಮಂಜುನಾಥಸ್ವಾಮಿ, ಅಲ್ಲದೆ ರೇವಣಸಿದ್ಧಸ್ವಾಮಿಗೂ ಮತ್ತು ತಮ್ಮ ಸುತ್ತಲಿನ ಚೌಡಿ, ಭೂತಗಳಿಗೂ  ನಡದುಕೊಳ್ಳುತ್ತಾರೆ. ಎಲ್ಲಾ ಬುಡಕಟ್ಟು ಸಮುದಾಯದವರಂತೆ ಸುಡುಗಾಡು ಸಿದ್ಧರು ಸಾಮಾನ್ಯವಾಗಿ ಶಕ್ತಿ ದೇವತೆಗಳ ಉಪಾಸಕರು ದುರ್ಗವ್ವ, ದ್ಯಾಮವ್ವ, ಮರಿಯಮ್ಮ, ಎಲ್ಲಮ್ಮ ಮೊದಲಾದ ಶಕ್ತಿ ದೇವತೆಗಳನ್ನು ಪೂಜಿಸುತ್ತಾರೆ. ಸಿದ್ಧರು ಆಂಧ್ರ ಹಾಗೂ ಕರ್ನಾಟಕದ ಶ್ರೀಶೈಲನ ಭಕ್ತರಾಗಿದ್ದಾರೆ.

ಸುಡುಗಾಡು ಸಿದ್ಧರು ವರ್ಷಕ್ಕೊಮ್ಮ ದಸರಾ ಹಬ್ಬದಲ್ಲಿ ಹಿರಿಯರ ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಘಟಸ್ಥಾಪನೆ ಮಾಡಿ ಪೂರ್ವಿಕರ ಇಷ್ಟಾರ್ಥ ಪದಾರ್ಥಗಳನ್ನು ಇಟ್ಟು, ಎಡೆಕೊಟ್ಟು ಪೂಜಿಸುತ್ತಾರೆ. ಭಾದ್ರಪದ ಇಲ್ಲವೆ ಕಾರ್ತಿಕ ಮಾಸಗಳಲ್ಲಿ ವರ್ಷಕ್ಕೊಮ್ಮ ಸತ್ತವರ ದಿನಗಳನ್ನು ಆಚರಿಸುತ್ತಾರೆ.

**ಶಾಂತಿ ಪೂಜೆ**

ನಾಡಿಗೆ ಬರಗಾಲ, ಊರಿಗೆ ಮಾರಕ, ಪಿಡುಗು, ಕಾಲರಾ, ದ್ಯಾಮವ್ವ, ದುರಗವ್ವ, ಕಾಟ ಹೆಚ್ಚಾದಾಗ ಮತ್ತು ಚಿಕ್ಕ ಮಕ್ಕಳು ದನಕರುಗಳಿಗೆ ಬಲವಿಲ್ಲದಾಗ ಹಳ್ಳಿಯ ಪ್ರಮುಖರು ಸೇರಿ ಊರಿನಲ್ಲಿ ಶಾಂತಿ ನಲೆಸುವುದಕ್ಕೆಂದು ಸುಡುಗಾಡು ಸಿದ್ಧರನ್ನು ಕರೆಯಿಸಿ ಮೂರು ದಿನಗಳವರೆಗೆ ರಾತ್ರಿಯೀಡೀ ಪೂಜೆ ಮಾಡಿಸುತ್ತಾರೆ. ಹೀಗೆ ಮಾಡುವುದರಿಂದ ದೇವತೆಗಳೆಲ್ಲಾ ಶಾಂತರಾಗಿ ಎಲ್ಲಾ ಪೀಡೆಗಳು ಮಾಯಾವಾಗಿ ಊರಿಗೆ ಒಳ್ಳೆಯದಾಗುವುದೆಂಬ ನಂಬಿಕೆ ಇಂದಿಗೂ ಹಳ್ಳಿಗರಲ್ಲಿದೆ. ಸುಡುಗಾಡು ಸಿದ್ಧರು ಹಿಂದೂ ಹಾಗೂ ಮುಸ್ಲಿಂರು ಆಚರಿಸುವ ಪ್ರಮುಖ ಹಬ್ಬಗಳನ್ನು ಆಚರಿಸುತ್ತಾರೆ. ಆದರೆ ಅವರದೇ ಆದ ವಿಶಿಷ್ಟ ಹಬ್ಬ ಆಚರಣೆಗಳು ಕಂಡುಬರುವುದಿಲ್ಲ. ಪ್ರಾದೇಶಿಕವಾಗಿ ಅಲ್ಲಲ್ಲಿಯ ಹಬ್ಬ ಹರಿದಿನಗಳನ್ನು ತಮ್ಮದನ್ನಾಗಿಸಿಕೊಂಡಿದ್ದಾರೆ.

ಸುಡುಗಾಡು ಸಿದ್ಧರು ಮಾಡುವ ದೀರ್ಘವಾದ ಭಯಾನಕ ಪೂಜೆಗಳಿಂದ ಮಾರಿ, ಮಸಣಿ, ಭೂತ, ಪಿಶಾಚಿಗಳೆಲ್ಲ ದೂರವಾಗುತ್ತವೆಂದು ಜನಪದರು ಇಂದಿಗೂ ನಂಬುತ್ತಾರೆ. ಮಲ್ಲಾಡ ಚೌಡಿ ಸಿದ್ಧರು ಪೂಜಿಸುವ ವಿಶೇಷ ದೇವತೆ. ಈ ದೇವತೆಗಳಿಗೆ ಪ್ರತಿ ಅಮಾವಾಸ್ಯೆ ದಿವಸ ಒಂದು ಕೋಳಿ, ಒಂಭತ್ತು ಲಿಂಬೆಹಣ್ಣು, ಒಂದು ತೆಂಗು ಇತ್ಯಾದಿಗಳನ್ನು ಅರ್ಪಿಸಿ ಶಾಂತಿ ಮಾಡಿದಲ್ಲಿ ಎಲ್ಲಾ ಸಂಕಷ್ಟಗಳು ಪರಿಹಾರವಾಗುತ್ತವೆಂದು ನಂಬಿದ್ದಾರೆ. ಹೀಗೆ ಸುಡುಗಾಡು ಸಿದ್ಧರು ಜಾಗತೀಕರಣದ ಸಂದರ್ಭದಲ್ಲಿಯೂ ತಮ್ಮ ಅನನ್ಯ ಸಂಸ್ಕೃತಿಯನ್ನು ಉಳಿಸಿಕೊಂಡು ಬರುತ್ತಿರುವುದು ಅಧ್ಯಯನದಿಂದ ತಿಳಿದುಬಂದಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಬಸವರಾಜು, ನೆಲ್ಲಿಸರ. (1984). ಸುಡುಗಾಡು ಸಿದ್ಧರು. ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.
- ಲಕ್ಕಪ್ಪಗೌಡ ಎಚ್. ಜೆ 2000, ಕರ್ನಾಟಕ ಬುಡಕಟ್ಟುಗಳು (ಸಂಪುಟ–1,2) ಮಯೂರ ಪ್ರಕಾಶನ, ಬಸವೇಶ್ವರನಗರ, ಬೆಂಗಳೂರು.
- ಖಂಡೋಬಾ, ಪಿ.ಕೆ. (1991). ಕರ್ನಾಟಕದ ಲಂಬಾಣಿಗಳು–ಒಂದು ಸಾಂಸ್ಕೃತಿಕ ಅಧ್ಯಯನ. ಪಿಎಚ್. ಡಿ ಪ್ರಬಂಧ, ತೇಜಸಿಂಗ್ ರಾಠೋಡ ಮೆಮೋರಿಯಲ್ ಟ್ರಸ್ಟ, ಗುಲಬರ್ಗಾ.
- ಶರಣಪ್ಪ, ವಡಿಗೇರಿ. (29–01–1989). ಸಿದ್ಧರು! ಇನ್ನಷ್ಟು ಮಾಹಿತಿ. ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ.